# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 126 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 02-03-2020 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>
<u>ಪ್ರಾಥಮಿಕ ಶಿಕ್ಷಣ:</u><br>
ಮಾರ್ಚ್-2019ರ ಅಂತ್ಯಕ್ಕೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ವೃಂದದ ಒಟ್ಟು 24891 ಖಾಲಿ ಹುದ್ದೆಗಳಿದ್ದು, ಈ ಪೈಕಿ ಸಹ ಶಿಕ್ಷಕರ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ-22150.<br><br>
ಈಗಾಗಲೇ ರಾಜ್ಯದ ಸರ್ಕಾರಿ ಶಾಲೆಗಳ ಖಾಲಿ ಹುದ್ದೆಗಳಲ್ಲಿ, ಒಟ್ಟು 10565 ಪದವೀಧರ ಶಿಕ್ಷಕರನ್ನು ನೇಮಿಸಿಕೊಳ್ಳಲು ಜಿಲ್ಲಾವಾರು ಅಧಿಸೂಚನೆ ಹೊರಡಿಸಲಾಗಿತ್ತು. ಇದರಲ್ಲಿ, ಒಟ್ಟು 1994 ಅಭ್ಯರ್ಥಿಗಳು ಆಯ್ಕೆಯಾಗಿರುತ್ತಾರೆ.<br><br>
ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ 2019-20ನೇ ಸಾಲಿಗೆ ಮಂಜೂರಾಗಿದ್ದ 22150 ಅತಿಥಿ ಶಿಕ್ಷಕರ ಸಂಖ್ಯೆಯ ಪೈಕಿ ಒಟ್ಟು 17220 ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಶಾಲಾ ಮಕ್ಕಳ ಕಲಿಕೆಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಿದೆ.<br><br>
<u>ಪ್ರೌಢ ಶಿಕ್ಷಣ:</u><br>
ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ದಿನಾಂಕ:01.10.2019 ರಲ್ಲಿದ್ದಂತೆ ಒಟ್ಟು 5065 ವಿವಿಧ ವೃಂದದ ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಪದನಾಮ</th><th>ಮಂಜೂರಾದ ಹುದ್ದೆಗಳು</th><th>ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು</th><th>ಖಾಲಿ ಹುದ್ದೆ</th></tr>
<tr><td>1</td><td>ಸಹ ಶಿಕ್ಷಕರು</td><td>42328</td><td>38077</td><td>4251</td></tr>
<tr><td>2</td><td>ದೈಹಿಕ ಶಿಕ್ಷಣ ಶಿಕ್ಷಕರು</td><td>4941</td><td>4303</td><td>638</td></tr>
<tr><td>3</td><td>ವಿಶೇಷ ಶಿಕ್ಷಕರು</td><td>5091</td><td>4915</td><td>176</td></tr>
<tr><td></td><td>ಒಟ್ಟು</td><td>52360</td><td>47295</td><td>5065</td></tr>
</table>
<br>
ಖಾಲಿ ಇರುವ 5065 ಹುದ್ದೆಗಳಲ್ಲಿ, ಪದವೀಧರ ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ಮೂಲಕ ತುಂಬುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಶೀಘ್ರದಲ್ಲಿಯೇ 2285 ಹುದ್ದೆಗಳನ್ನು ಭರ್ತಿ ಮಾಡಲಾಗುವುದು.<br><br>
ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು 2019-20ನೇ ಸಾಲಿನಲ್ಲಿ 3451 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ ಹಾಗೂ ಶಾಲಾ ಶೈಕ್ಷಣಿಕ ಚಟುವಟಿಕೆಗೆ ತೊಂದರೆಯಾಗದಂತೆ ಕ್ರಮವಹಿಸಿದೆ.
</td></tr>
</table>

| ಪ್ರಶ್ನೆ | | ಉತ್ತರ |
|---|---|---|
| ಆ) | 2018-19ನೇ ಸಾಲಿನಿಂದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ನಿರ್ಮಾಣಗೊಂಡಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು? ಈ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು? | ವಿವಿಧ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಮಂಜೂರು ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ: |

(ರೂ.ಲಕ್ಷಗಳಲ್ಲಿ)

| ವರ್ಷ | ಯೋಜನೆ | ಕೊಠಡಿಗಳ ಸಂಖ್ಯೆ/ಅನುದಾನ | | | | ಒಟ್ಟು |
|---|---|---|---|---|---|---|
| | | ಪ್ರಾಥಮಿಕ ಶಾಲೆ | ಅನುದಾನ | ಪ್ರೌಢ ಶಾಲೆ | ಅನುದಾನ | |
| 2018-19 | ರಾಜ್ಯವಲಯ, ವಿಶೇಷ ಪ್ಯಾಕೇಜ್/ ವಿಶೇಷ ಅಭಿವೃದ್ಧಿ ಯೋಜನೆ | 1627 | 11825.00 | 1280 | 15582.00 | **27407.00** |
| 2019-20 | ರಾಜ್ಯವಲಯ, ವಿಶೇಷ ಪ್ಯಾಕೇಜ್/ ವಿಶೇಷ ಅಭಿವೃದ್ಧಿ ಯೋಜನೆ | 645 | 6828.60 | 328 | 5161.75 | **11990.35** |
| 2019-20 | ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್-25 (ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಶಾಲೆಗಳು) | 6044 | 68919.00 | 425 | 6888.00 | **75807.00** |

| | | |
|---|---|---|
| (ಇ) | ರಾಜ್ಯದಲ್ಲಿ ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡ, ಮೂಲಭೂತ ಸೌಕರ್ಯದ (ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಇತ್ಯಾದಿ) ಕೊರತೆಯಿದೆ (ವಿವರ ನೀಡುವುದು); ಅಭಿವೃದ್ಧಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? | ರಾಜ್ಯದಲ್ಲಿರುವ ಒಟ್ಟಾರೆ ಶಾಲೆಗಳ ಸಂಖ್ಯೆ – 48533<br>ಸ್ವಂತ ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ – 1145<br>ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ – 455<br>ಬಾಡಿಗೆ ರಹಿತ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ – 690<br>ಮೂಲಭೂತ ಸೌಕರ್ಯಗಳ ಕೊರತೆಯಿರುವ ಶಾಲೆಗಳ ವಿವರ ಈ ಕೆಳಕಂಡಂತಿದೆ: (UDISE 2019-20ರ ಅಂಕಿ ಅಂಶವನ್ನು ಆಧರಿಸಿದೆ) |

| ಕ್ರ. ಸಂ. | ವಿವರ | ಕೊರತೆಯಿರುವ ಶಾಲೆಗಳ ಸಂಖ್ಯೆ |
|---|---|---|
| 1 | ಕುಡಿಯುವ ನೀರು | 97 |
| 2 | ಶೌಚಾಲಯ | 840 |
| 3 | ಆಟದ ಮೈದಾನ | 21205 |
| 4 | ಕಾಂಪೌಂಡ್ | 9757 |

ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ.

ಮಹಾತ್ಮ ಗಾಂಧಿ ನರೇಗಾ ಹಾಗೂ ಸ್ವಚ್ಛ ನೀರು ಮತ್ತು ನೈರ್ಮಲ್ಯ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ದುರಸ್ಥಿ ಹಾಗೂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

2019-20ನೇ ಸಾಲಿನಲ್ಲಿ ಸ್ವಚ್ಛಭಾರತ ಯೋಜನೆಯಡಿ 720 ಶೌಚಾಲಯಗಳನ್ನು ತಲಾ ರೂ.2.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಾಣ ಕೈಗೊಳ್ಳಲಾಗಿದೆ. ~~ಹಾಗೂ~~ ಮಹಾತ್ಮಾಗಾಂಧಿ ನರೇಗಾ ಯೋಜನೆಯ "ಸುಭದ್ರ ಶಾಲೆ" ಕಾರ್ಯಕ್ರಮದಡಿ 6825 ಸರ್ಕಾರಿ ಶಾಲೆಗಳಿಗೆ ಆವರಣ ಗೋಡೆಯನ್ನು ರೂ.90.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುದಾನ ಒದಗಿಸಲಾಗಿರುತ್ತದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

2020-21ನೇ ಸಾಲಿನಲ್ಲಿ, ಸರ್ಕಾರಿ ಶಾಲೆಗಳಲ್ಲಿ ಆಟದ ಮೈದಾನ, ಶೌಚಾಲಯ ಮತ್ತು ಕಾಂಪೌಂಡ್ ನಿರ್ಮಾಣ ಕಾಮಗಾರಿಗಳನ್ನು ಸಹ ಮಹಾತ್ಮಾಗಾಂಧಿ ನರೇಗಾ ಯೋಜನೆಯ "ಸುಭದ್ರ ಶಾಲೆ" ಕಾರ್ಯಕ್ರಮದಡಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

**ಇಪಿ 48 ಯೋಸಕ 2020**

**(ಎಸ್. ಸುರೇಶ್ ಕುಮಾರ್)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

## ಅನುಬಂಧ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:126.

| SL. NO | DISTRICT NAME | TOTAL NO OF SCHOOLS | NO. OF SCHOOLS NEED TOILETS | NO. OF SCHOOLS NEED DRINKING WATER | NO OF SCHOOLS NEED PLAY GROUND | NO OF SCHOOLS NEED COMPOUND | NO OF SCHOOLS NOT HAVING OWN BUILDING | | |
|---|---|---|---|---|---|---|---|---|---|
| | | | | | | | Rented | Rent Free | Total |
| 1 | BAGALKOTE | 1461 | 52 | 2 | 523 | 219 | 24 | 26 | 50 |
| 2 | BAGALORE NORTH | 556 | 7 | 2 | 272 | 73 | 39 | 25 | 64 |
| 3 | BANGALORE RURAL | 1151 | 6 | 4 | 597 | 150 | 1 | 12 | 13 |
| 4 | BANGALORE SOUTH | 965 | 16 | 12 | 503 | 149 | 18 | 36 | 54 |
| 5 | BELAGAVI | 1549 | 19 | 1 | 617 | 346 | 32 | 41 | 73 |
| 6 | BELLARY | 1835 | 53 | 1 | 884 | 402 | 4 | 22 | 26 |
| 7 | BIDAR | 1438 | 15 | 0 | 670 | 419 | 10 | 21 | 31 |
| 8 | CHAMARAJANAGAR | 865 | 6 | 1 | 419 | 125 | 8 | 8 | 16 |
| 9 | CHIKBALLAPURA | 1578 | 32 | 4 | 870 | 339 | 10 | 26 | 36 |
| 10 | CHIKKODI | 1957 | 61 | 3 | 438 | 486 | 26 | 33 | 59 |
| 11 | CHIKMAGALORE | 1491 | 20 | 5 | 498 | 208 | 2 | 10 | 12 |
| 12 | CHITRADURGA | 1772 | 43 | 6 | 854 | 364 | 15 | 23 | 38 |
| 13 | DAKSHINA KANNADA | 1077 | 1 | 0 | 190 | 176 | 5 | 9 | 14 |
| 14 | DAVANAGERE | 1217 | 42 | 2 | 494 | 142 | 22 | 18 | 40 |
| 15 | DHARWAD | 872 | 24 | 0 | 328 | 173 | 30 | 49 | 79 |
| 16 | GADAG | 730 | 8 | 0 | 210 | 61 | 4 | 10 | 14 |
| 17 | HASSAN | 2583 | 18 | 3 | 1230 | 558 | 4 | 14 | 18 |
| 18 | HAVERI | 1324 | 36 | 5 | 529 | 212 | 8 | 4 | 12 |
| 19 | KALBURGI | 2078 | 64 | 0 | 1074 | 676 | 13 | 36 | 49 |
| 20 | KODAGU | 428 | 1 | 0 | 78 | 37 | 0 | 6 | 6 |
| 21 | KOLAR | 1944 | 33 | 1 | 1147 | 415 | 24 | 22 | 46 |
| 22 | KOPPAL | 1128 | 14 | 2 | 419 | 147 | 2 | 18 | 20 |
| 23 | MADHUGIRI | 1365 | 5 | 0 | 603 | 162 | 0 | 6 | 6 |
| 24 | MANDYA | 1819 | 18 | 6 | 734 | 227 | 4 | 26 | 30 |
| 25 | MYSORE | 2140 | 38 | 16 | 1044 | 171 | 24 | 67 | 91 |
| 26 | RAICHUR | 1629 | 54 | 0 | 714 | 455 | 0 | 4 | 4 |
| 27 | RAMANAGAR | 1370 | 10 | 0 | 796 | 279 | 4 | 25 | 29 |
| 28 | SHIMOGA | 2039 | 23 | 5 | 933 | 237 | 6 | 15 | 21 |
| 29 | SIRSI | 1210 | 15 | 6 | 478 | 273 | 14 | 13 | 27 |
| 30 | TUMKUR | 2201 | 21 | 7 | 1300 | 449 | 23 | 12 | 35 |
| 31 | UDUPI | 693 | 2 | 2 | 155 | 222 | 23 | 2 | 25 |
| 32 | UTTARA KANNADA | 1016 | 0 | 0 | 438 | 195 | 20 | 6 | 26 |
| 33 | VIJAYAPURA | 1990 | 47 | 1 | 680 | 814 | 34 | 26 | 60 |
| 34 | YADGIR | 1062 | 36 | 0 | 486 | 396 | 2 | 19 | 21 |
| | **TOTAL** | **48533** | **840** | **97** | **21205** | **9757** | **455** | **690** | **1145** |